# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 248 | Pages. 2 | Date: 13-09-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 248 - ಪುಟಗಳು : 2 | 13-09-2026 | ಭಾನುವಾರ | Ph: 8762954248 | ದರ : ₹1


# ಸಿದ್ದರಾಮಯ್ಯ ರಾಜಕೀಯದಿಂದ ನಿವೃತ್ತಿ ಆಗಲ್ಲ

## ಸಚಿವ ಶಿವಲಿಂಗೇಗೌಡ ಅಭಿಮತ I ರಾಜ್ಯಸಭೆ, ಲೋಕಸಭೆ ಪ್ರತಿನಿಧಿಸಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂಬುದು ನಮ್ಮ ಹಾಗೂ ಕಾಂಗ್ರೆಸ್ ಪಕ್ಷದ ಒತ್ತಾಸೆ, ನಮ್ಮ ನಾಯಕರು ಮತ್ತೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರು ರಾಜಕೀಯ ನಿವೃತ್ತಿ ಆಗಲ್ಲ.ಆದರೆ ಮುಂದೆ ಚುನಾವಣೆಯಲ್ಲಿ ನಿಲ್ಲಬೇಕೋ, ಬೇಡವೋ ಎಂಬ ಯೋಚನೆ ಯಲ್ಲಿದ್ದಾರೆ ಅಷ್ಟೆ ಎಂದರು.

ಆದರೆ ಅವರು ಸ್ಪರ್ಧೆ ಮಾಡಬೇಕು ಎಂದು ನಮ್ಮೆಲ್ಲರ ಹಾಗೂ ಪಕ್ಷದ ಒತ್ತಾಯ ಇದೆ. ಹಾಗಾಗಿ ಚುನಾವಣೆಗೆ ನಿಲ್ಲುತ್ತಾರೆ, ಇನ್ನೂ ಹಲವು ವರ್ಷ ಸಕ್ರಿಯ ರಾಜಕೀಯದಲ್ಲಿ ಮುಂದುವರಿಯಲಿದ್ದಾರೆ ಎಂದರು.

ಸಿದ್ದರಾಮಯ್ಯ ಅವರು ಚುನಾವಣಾ ರಾಜಕೀಯದಲ್ಲಿ ಇರಬೇಕು, ಮಾತ್ರವಲ್ಲ ಅವರು ರಾಷ್ಟ್ರ ರಾಜಕಾರಣಕ್ಕೂ ಹೋಗಬೇಕು ಎಂದ ಶಿವಲಿಂಗೇಗೌಡ, ರಾಜ್ಯಸಭೆ ಮತ್ತು ಲೋಕಸಭೆಯಲ್ಲೂ ಅವರ ಸೇವೆ ಸಲ್ಲಬೇಕು ಎಂಬುದು ನಮ್ಮ ಬಯಕೆ, ಅವರ ಸೇವೆ ಮತ್ತಷ್ಟು ವರ್ಷ ರಾಜ್ಯ ಮತ್ತು ರಾಷ್ಟ್ರಕ್ಕೆ ಬೇಕು ಎಂದು ಆಶಿಸಿದರು.



ಸಿದ್ದರಾಮಯ್ಯ ಹೇಳಿಕೆ ಹಿನ್ನೆಲೆಯಲ್ಲಿ ಕೆಲ ನಾಯಕರು ಕಾಂಗ್ರೆಸ್ ಬಿಡಲು ಸಿದ್ಧರಾಗಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ ಎಂಬ ಪ್ರಶ್ನೆಗೆ, ಅದೆಲ್ಲ ಸುಳ್ಳು ಯಾರೂ ಕಾಂಗ್ರೆಸ್ ಬಿಡಲ್ಲ ಎಂದು ಸ್ಪಷ್ಟಪಡಿಸಿದರು.

ರಾಜಕೀಯ ಯಾತ್ರೆ: ಬಿಜೆಪಿಯವರ ಬಳ್ಳಾರಿ ಪಾದಯಾತ್ರೆ ರಾಜಕೀಯ ಪ್ರೇರಿತ. ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ಸದನ ಹಾಳು ಮಾಡಿದರು. ನಂತರ ರಾಜೀನಾಮೆ ಕೊಟ್ಟ ಮೇಲೆ ಮುಗಿಯಿತು ಅಲ್ವಾ, ಮತ್ತೆ ಏಕೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ನಾಗೇಂದ್ರ ಆರೋಪಿಯಷ್ಟೇ, ಅಪರಾಧಿ ಅಲ್ಲ ಆದರೂ ಮಾವನೀಯತೆ ಹಿನ್ನೆಲೆಯಲ್ಲಿ ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಈ ರೀತಿಯ ಆರೋಪ ಹೊತ್ತವರು ದೇಶದಲ್ಲಿ ಎಷ್ಟು ಜನ ಇಲ್ಲ ಎಂದು ಕೇಳಿದರು.

84 ಕೋಟಿ ರೂ. ಹಸ್ತಾಂತರ ಆಗಿತ್ತು, ಅದರಲ್ಲಿ 79 ಕೋಟಿ ರೂ. ವಾಪಸ್ ಬಂದಿದೆ. ಹಣ ವರ್ಗಾವಣೆಯಲ್ಲಿ ನಾಗೇಂದ್ರ ಅವರ ಪಾತ್ರ ಇಲ್ಲ ಎಂದು ತನಿಖಾ ಸಂಸ್ಥೆಯೇ ಹೇಳಿದೆ ಎಂದರು.

## ರೈತರ ಕೆಲಸ ಪುಣ್ಯದ ಕೆಲಸ: ಶಿವಲಿಂಗೇಗೌಡ

ಅರಸೀಕೆರೆ: ನಮ್ಮ ಸರ್ಕಾರ ಸುಭದ್ರ ಆಡಳಿತ ನೀಡಲು ಬದ್ಧವಾಗಿದೆ. ಬರ ಸೇರಿ ಎಂಥ ಪರಿಸ್ಥಿತಿ ಎದುರಾದರೂ ಜನಪರ ನಿಲ್ಲಲಿದೆ ಎಂದು ಅಬಕಾರಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಭರವಸೆ ನೀಡಿದರು.

ನಗರದ ಎಪಿಎಂಸಿಯಲ್ಲಿ ನಡೆದ ಪ್ರಜಾಸೇವಾ ಆಂದೋಲನ ಸಭೆ ಹಾಗೂ ವಿವಿಧ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ನಾವು ನಿಂದಕರಿಗೆ ಹೆದರುವ ಅವಶ್ಯ ಇಲ್ಲ. ಜನರ ಆಶೋತ್ತರಗಳಿಗೆ ಸ್ಪಂದಿಸಿ ಕೆಲಸ ಮಾಡುವೆ ಎಂದರು. ನಿಮ್ಮ ಬಳಿ ನಾವೇ ಬಂದು ಕಷ್ಟಸುಖ ತಿಳಿಸು ಸ್ಪಂದಿಸಲು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೇಶದಲ್ಲೇ ಮೊದಲ ಬಾರಿಗೆ ಪ್ರಜಾಸೇವಾ ಆಂದೋಲನ ರೂಪಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಎಸಿ ಜಗದೀಶ್ ಗಂಗಣ್ಣನವರ್, ತಹಸೀಲ್ದಾರ್ ಸಂತೋಷ ಕುಮಾರ್, ಕೈಗಾರಿಕಾ ಇಲಾಖೆ ಜೆಡಿ ಮಹೇಶ್ ಕುಮಾರ್, ಕಾರ್ಮಿಕ ಅಧಿಕಾರಿ ಸುರೇಶ್, ತಾಪಂ ಇಒ ಗಂಗಣ್ಣ, ನಗರಸಭೆ ಆಯುಕ್ತ ಕೃಷ್ಣಮೂರ್ತಿ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್ , ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಮೊದಲಾದವರಿದ್ದರು.

## ರಾಹುಲ್ ಗಾಂಧಿ ಪ್ರಧಾನಿ: ವಿಶ್ವಾಸ

ರಾಜ್ಯದಲ್ಲಿ ನಮ್ಮ ಪಕ್ಷ ಸುಭದ್ರ ಆಡಳಿತ ನೀಡುತ್ತಿದೆ. ದೇಶದಲ್ಲೂ ಕಾಂಗ್ರೆಸ್ ಸುಭದ್ರವಾಗಿದ್ದು 2029ಕ್ಕೆ ರಾಹುಲ್ ಗಾಂಧಿ ದೇಶದ ಪ್ರಧಾನಿ ಆಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಕಳೆದ ಮೂರು ಅವಧಿಯಲ್ಲ ಬಿಜೆಪಿ ಆಡಳಿತವನ್ನು ದೇಶದ ಜನರು ನೋಡಿದ್ದಾರೆ. ಯುವಶಕ್ತಿ ರಾಹುಲ್ ಗಾಂಧಿ ಪರ ಒಲವು ಹೊಂದಿದ್ದು, ನಮ್ಮ ಯುವ ನಾಯಕರು ಪ್ರಧಾನಿ ಆಗುವುದು ನಿಶ್ಚಿತ ಎಂದರು.

ನಮ್ಮ ಸರ್ಕಾರ ಉತ್ತಮ ಆಡಳಿತ ನೀಡುತ್ತಿದೆ. ಜನಪರ ಕಾರ್ಯಕ್ರಮ ಜಾರಿ ಮಾಡುತ್ತಿದೆ. ಇದನ್ನು ಸಹಿಸಲಾಗದೆ ಇಕ್ಕಟ್ಟಿಗೆ ಸಿಲುಕಿಸಲು ಹೀಗೆಲ್ಲಾ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

## ಅರ್ಧಕ್ಕೆ ನಿಂತ ಕಾಮಗಾರಿ ಪೂರ್ಣಗೊಳಿಸಲು ತ್ವರಿತ ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಹೊಸದಾಗಿ ನೂರು ಕಾಮಗಾರಿಗಳನ್ನು ಆರಂಭಿಸಿ ಅರ್ಧಕ್ಕೆ ನಿಲ್ಲಿಸುವುದಕ್ಕಿಂತ ಈಗಾಗಲೇ ಆರಂಭಗೊಂಡಿರುವ ಹತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಿ ಜನರ ಬಳಕೆಗೆ ನೀಡುವುದು ಉತ್ತಮ. ಕ್ಷೇತ್ರದಲ್ಲಿ ಅಪೂರ್ಣಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಆದ್ಯತೆ ನೀಡುತ್ತಿದ್ದೇನೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಯಸಳೂರು ಹೋಬಳಿಯ ದೊಡ್ಡಕಲ್ಲೂರು ಗ್ರಾಮದಲ್ಲಿ ನಿರ್ಮಿಸಿರುವ ಶ್ರೀ ಗುರು ನಿರ್ವಾಣ ಸ್ವಾಮಿ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಶಾಸಕನಾಗಿ ಆಯ್ಕೆಯಾದ ಬಳಿಕ ವಿವಿಧ ಯೋಜನೆಗಳಡಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತರುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ನಡೆಸುತ್ತಿದ್ದೇನೆ. ಶಾಸಕರಿಗೆ ಲಭ್ಯವಾಗುವ ಅನುದಾನ ಸೀಮಿತವಾಗಿದ್ದರೂ, ಸರ್ಕಾರದ ಮಟ್ಟದಲ್ಲಿ ಅಗತ್ಯ ಅನುದಾನಕ್ಕಾಗಿ ಹೋರಾಟ ನಡೆಸಿ ಕ್ಷೇತ್ರದಲ್ಲಿ ಯಾವ ಕಾಮಗಾರಿ ತುರ್ತಾಗಿ ಆಗಬೇಕು,



ಯಾವುದನ್ನು ಮೊದಲು ಪೂರ್ಣಗೊಳಿಸಬೇಕು ಎಂಬುದನ್ನು ಆದ್ಯತೆ ಮೇರೆಗೆ ನಿರ್ಧರಿಸಿ ಕೆಲಸ ಮಾಡಲಾಗುತ್ತಿದೆ ಎಂದರು.

ಕೇವಲ ಆಡಂಬರಕ್ಕಾಗಿ ಕಾಮಗಾರಿಗಳನ್ನು ಆರಂಭಿಸುವುದರಿಂದ ಜನರಿಗೂ ಪ್ರಯೋಜನವಿಲ್ಲ, ಸರ್ಕಾರದ ಹಣವೂ ಸದುಪಯೋಗವಾಗುವುದಿಲ್ಲ. ಈಗಾಗಲೇ ಆರಂಭಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ನೀಡಬೇಕು ಎಂಬುದು ನನ್ನ ನಿಲುವು. ಅದೇ ಉದ್ದೇಶದಿಂದ ಈ ಸಮುದಾಯ ಭವನವನ್ನು ಪೂರ್ಣಗೊಳಿಸಿ ಇಂದು ಗ್ರಾಮಸ್ಥರಿಗೆ ಸಮರ್ಪಿಸಲಾಗಿದೆ ಎಂದು ಹೇಳಿದರು.

ಸಮುದಾಯ ಭವನ ಪೂರ್ಣಗೊಳ್ಳುವಲ್ಲಿ ಗ್ರಾಮದ ರವಿ ಮತ್ತು ಅವರ ತಂಡ ಸೇರಿ ಗ್ರಾಮಸ್ಥರು ತೋರಿದ ಇಚ್ಛಾಶಕ್ತಿ ಶ್ಲಾಘನೀಯ. ಗೋಮಾಳವನ್ನು ಉಳಿಸಿಕೊಳ್ಳುವುದರಿಂದ ಹಿಡಿದು ಸಮುದಾಯ ಭವನದ ಕಾಮಗಾರಿ ಪೂರ್ಣಗೊಳ್ಳುವವರೆಗೂ ಗ್ರಾಮಸ್ಥರು ನಿರಂತರವಾಗಿ ಗಮನ ಸೆಳೆದಿದ್ದಾರೆ. ಎಲ್ಲರ ಪರಿಶ್ರಮದಿಂದ ಇಂದು ಸುಸಜ್ಜಿತ ಸಮುದಾಯ ಭವನ ರೂಪುಗೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಭವನದಿಂದ ಗ್ರಾಮದ ಸಂಘ-ಸಂಸ್ಥೆಗಳ ಸಭೆ, ಧಾರ್ಮಿಕ, ಸಾಮಾಜಿಕ ಹಾಗೂ ಸಣ್ಣಪುಟ್ಟ ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗಲಿದೆ. ಜನರು ಒಟ್ಟಾಗಿ ಸೇರಲು ಒಂದು ಉತ್ತಮ ವೇದಿಕೆ ದೊರೆತಿರುವುದು ಸಂತಸದ ಸಂಗತಿ ಎಂದರು.

ದೊಡ್ಡಕಲ್ಲೂರು ಗ್ರಾಮದ ರಸ್ತೆ ಅಭಿವೃದ್ಧಿಗೂ ಈ ಹಿಂದೆ ಬೇಡಿಕೆ ಹಾಗೂ ಹೋರಾಟ ನಡೆದಿತ್ತು. ಅದಕ್ಕೂ ಸ್ಪಂದಿಸಿ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಯಸಳೂರು ಹೋಬಳಿ ಹಾಗೂ ಈ ಭಾಗಕ್ಕೆ ಅಗತ್ಯವಿರುವ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕ್ಷೇತ್ರದ ಜನರು ನನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಹಾಗೂ ಬೆಂಬಲವನ್ನು ಉಳಿಸಿಕೊಳ್ಳುವುದು ನನ್ನ ಜವಾಬ್ದಾರಿ. ಸದಾ ಜನರೊಂದಿಗೆ ಇದ್ದು, ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆಟಟಿ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕಾರ್ಯಕ್ರಮದಲ್ಲಿ ಕೊಡ್ಲಿಪೇಟೆಯ ಕಿರಿಕೊಡ್ಲಿ ಮಠದ ಸದಾಶಿವ ಮಹಾ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು

ಗ್ರಾಮದ ಅಧ್ಯಕ್ಷ ಕಿರಣ್, ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸವಿನ್ ಗೌಡ, ಮುಖಂಡರಾದ ಪವಿತ್ರ, ರವಿ ತೇಜ ಹಾಗೂ ಇತರರಿದ್ದರು.

## ಮಹಿಳಾ ರೈತರಿಗೆ ಪುನಶ್ಚೇತನ ಕಾಫಿ ಕೃಷಿ ತರಬೇತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಹೆತ್ತೂರು ಹೋಬಳಿ ವಳಲಳ್ಳಿ ಗ್ರಾಮದಲ್ಲಿ ಮಹಿಳಾ ರೈತರಿಗಾಗಿ ಐಸಿಸಿಆರ್ ಎಲ್ ಯೋಜನೆಯಡಿ ಪುನಶ್ಚೇತನ ಕಾಫಿ ಕೃಷಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಐಸಿಸಿಆರ್ಎಲ್ ಯೋಜನೆ ಸಂಯೋಜನಾಧಿಕಾರಿ ದಿವ್ಯ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹವಾಮಾನದಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತಿವೆ. ಈ ಹಿನ್ನಲೆಯಲ್ಲಿ ಕೃಷಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಯೊಂದಿಗೆ ಜೀವ ವೈವಿಧ್ಯವನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಕೃಷಿ ಜೊತೆಗೆ ಉಪಕಸುಬುಗಳನ್ನು ಅಳವಡಿಸಿಕೊಂಡು ಸಮಗ್ರ ಕೃಷಿ ಪದ್ಧತಿ ಅನುಸರಿಸುವುದರಿಂದ ರೈತ ಕುಟುಂಬಗಳ ಜೀವನೋಪಾಯವನ್ನು ಮತ್ತಷ್ಟು ಬಲಪಡಿಸಬಹುದು ಎಂದು ತಿಳಿಸಿದರು.

ಐಸಿಸಿಆರ್ಎಲ್ ನಿರ್ದೇಶಕ ಅಶೋಕ್ ಕುಮಾರ್ ಮಾತನಾಡಿ, ಕಾಫಿ ಒಂದು ವಿಶಿಷ್ಟ ಬೆಳೆಯಾಗಿದ್ದು, ಅದರಲ್ಲಿ ಹೊಸ ಪ್ರಯೋಗಗಳನ್ನು ಕೈಗೊಳ್ಳಲು ಹಾಗೂ ವಿವಿಧ ರೀತಿಯಲ್ಲಿ ಮೌಲ್ಯವರ್ಧನೆ ಮಾಡಲು ಉತ್ತಮ ಅವಕಾಶಗಳಿವೆ. ಮಹಿಳಾ ರೈತರು ಕಾಫಿ ಉತ್ಪನ್ನಗಳಲ್ಲಿ ಹೆಚ್ಚಿನ ಮೌಲ್ಯವರ್ಧನೆ ಚಟುವಟಿಕೆಗಳನ್ನು ಕೈಗೊಂಡು ಆದಾಯ ಗಳಿಸುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು ಎಂದು ಹೇಳಿದರು.

ಭಾಗ್ಯವತಿ ಮಾತನಾಡಿ, ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಉತ್ತಮ ಬುದ್ಧಿಶಕ್ತಿ, ತಾಳ್ಮೆ ಮತ್ತು ಕಾರ್ಯನಿರ್ವಹಣಾ ಸಾಮರ್ಥ್ಯದಿಂದ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ ಎಂದರು.



ಕಾಫಿ ಮಂಡಳಿಯ ಎಸ್ಎಲ್ಒ ರಂಜಿತ್ ಮಾತನಾಡಿ, ಕಾಫಿ ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ರೈತರು ಸಮಯಕ್ಕೆ ಸರಿಯಾಗಿ ಅಗತ್ಯ ಮಾಹಿತಿ ಪಡೆದುಕೊಂಡು ಕಾಫಿ ಮಂಡಳಿಯಿಂದ ದೊರೆಯುವ ತಾಂತ್ರಿಕ ಸಲಹೆ ಹಾಗು ವಿವಿಧ ಅನುದಾನಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಐಸಿಸಿಆರ್ಎಲ್ ಜಿಲ್ಲಾ ಸಂಯೋಜಕ ಶಶಿಧರ್ ಹೊಸಗದ್ದೆ ಮಾತನಾಡಿ, ಮುಂದಿನ ದಿನಗಳಲ್ಲಿ ಇನ್ನಷ್ಟು ರೈತರೊಂದಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಯೋಜನೆಯಡಿ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ. ಮಹಿಳಾ ರೈತರು ಈ ಅವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡು ಪುನಶ್ಚೇತನ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕೆಂದರು.

ಐಸಿಸಿಆರ್ಎಲ್ ಕ್ಷೇತ್ರಾಧಿಕಾರಿ ವಿಶ್ವನಾಥ್ ಮತ್ತಿತರರಿದ್ದರು.

## ಸರ್ಕಾರಿ ಕಾಲೇಜಿನ ಅಭಿವೃದ್ಧಿಗೆ ಪ್ರಯತ್ನ: ಸಿಮೆಂಟ್ ಮಂಜು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ನಮ್ಮ ಜವಾಬ್ದಾರಿ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಪದವಿ ಪೂರ್ವ ಕಾಲೇಜಿನಲ್ಲಿ 2004ನೇ ಸಾಲಿನ ಎಸ್ಎಸ್ಎಲ್ಸಿ ಬಿ ಸೆಕ್ಷನ್ ವಿದ್ಯಾರ್ಥಿಗಳ ಸಹಯೋಗದಲ್ಲಿ ನಿರ್ಮಿಸಿರುವ ನೂತನ ನಾಮಫಲಕವನ್ನು ಉದ್ಘಾಟಿಸಿ ಮಾತನಾಡಿ, ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿಗಳು ಐಎಎಸ್, ಕೆಎಎಸ್, ಐಪಿಎಸ್ ಸೇರಿ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅಂತಹ ಹಳೆಯ ವಿದ್ಯಾರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿದ ಕಾಲೇಜಿನ ಉಳಿವು ಹಾಗೂ ಅಭಿವೃದ್ಧಿಗೆ ಕೈಜೋಡಿಸಬೇಕು. ಕಾಲೇಜಿನೊಂದಿಗೆ ತವ್ಮ ಸಂಬಂಧವನ್ನು ಮುಂದುವರಿಸಿಕೊಂಡು, ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ನೆರವಾಗಬೇಕು ಎಂದು ಮನವಿ ಮಾಡಿದರು.

ನಾನು ಶಾಸಕನಾಗಿ ಆಯ್ಕೆಯಾದ ಬಳಿಕ ಕಾಲೇಜಿನ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇನೆ. ಶೌಚಾಲಯ, ಕಾಂಪೌಂಡ್, ಛಾವಣಿ ಸೇರಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇನ್ನೂ ಅಗತ್ಯವಿರುವ ಸೌಲಭ್ಯಗಳನ್ನು ಹಂತ ಹಂತವಾಗಿ ಕಲ್ಪಿಸಿ ಕಾಲೇಜನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

## ಅಬಚೂರಿನ ಮಿತ್ರ ವೃಂದದಿಂದ ಕರ್ವಾಲೋ ಕ್ವಿಜ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಬಚೂರಿನ ಮಿತ್ರ ವೃಂದ ಹಾಗೂ ಸ್ಕಾಲರ್ಸ್ ಅಂತಾರಾಷ್ಟ್ರೀಯ ಶಾಲೆ ವತಿಯಿಂದ ಶನಿವಾರ ನಡೆದ ಕರ್ವಾಲೋ ಕ್ವಿಜ್‌ಗೆ ಭಾರೀ ಸ್ಪಂದನೆ ವ್ಯಕ್ತವಾಯಿತು.

ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿ ಆಧಾರಿತ ಕ್ವಿಜ್ ಅನ್ನು ಮಿತ್ರ ವೃಂದದ ಡಾ. ಡಿ.ಎಸ್. ಜಗದೀಶ್ ಹಾಗೂ ಡಾ. ವೈ.ವಿ.ವಿನೋದ್ ಕುಮಾರ್ ನಡೆಸಿಕೊಟ್ಟರು. ಸ್ಕಾಲರ್ಸ್ ಅಂತಾರಾಷ್ಟ್ರೀಯ ಶಾಲೆಯ ಮುಖ್ಯ ಆಡಳಿತಾಧಿಕಾರಿ ಡಾ. ಚಂದ್ರಶೇಖರ್ ಇದ್ದರು.

60ಕ್ಕೂ ಹೆಚ್ಚು ತೇಜಸ್ವಿ ಅವರ ಓದುಗ ಅಭಿಮಾನಿಗಳು ನಾಡಿನ ವಿವಿಧ ಮೂಲೆಗಳಿಂದ ಬಂದಿದ್ದರು. ಗದಗ, ವಿಜಯಪುರ, ಬಾಗಲಕೋಟೆ, ದಕ್ಷಿಣ ಕನ್ನಡ, ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಿಂದ ಬಂದಿದ್ದ ಸಾಹಿತ್ಯ ಪ್ರೇಮಿಗಳು ಪೂರ್ಣಚಂದ್ರ ತೇಜಸ್ವಿ ಅವರ ಬರವಣಿಗೆಗಳ ಕುರಿತು ತಮ್ಮದೇಯಾದ ಅಭಿಪ್ರಾಯ ವ್ಯಕ್ತಪಡಿಸಿದರು.

ಸ್ಪರ್ಧೆಯನ್ನು ವಯಸ್ಕರು ಮತ್ತು ಮಕ್ಕಳಿಗಾಗಿ ಎರಡು ವಿಭಾಗದಲ್ಲಿ ನಡೆಸಲಾಯಿತು.



ಸ್ಪರ್ಧೆಯ ಅಂಗವಾಗಿ ಮೊದಲಿಗೆ 30 ಅಂಕಗಳ ಪರೀಕ್ಷೆ ನಡೆಯಿತು. ಹೆಚ್ಚು ಅಂಕ ಪಡೆದ 10 ಜನರನ್ನು ಕ್ವಿಜ್‌ಗೆ ಆಯ್ಕೆ ಮಾಡಲಾಯಿತು. ತಲಾ ಇಬ್ಬರಂತೆ 5 ತಂಡಗಳನ್ನಾಗಿಸಿ ಸ್ಪರ್ಧೆ ಏರ್ಪಟ್ಟಿತು. ನಂತರ ಗೆದ್ದ ಮೂವರಿಗೆ ಪ್ರಥಮ 10 ಸಾವಿರ ರೂ. ದ್ವಿತೀಯ 5 ಸಾವಿರ ರೂ., ತೃತೀಯ ಮೂರು ಸಾವಿರ ರೂ., ಹಾಗೂ ಮಕ್ಕಳ ವಿಭಾಗದಲ್ಲಿ ಪ್ರಥಮ ಬಹುಮಾನ 5 ಸಾವಿರ ರೂ., ದ್ವಿತೀಯ 3 ಹಾಗು ತೃತೀಯ ಬಹುಮಾನ 1500 ರೂ. ನೀಡಿ ಗೌರವಿಸಲಾಯಿತು.

ಮುಕ್ತ ವಿಭಾಗದಲ್ಲಿ ಎನ್.ಆರ್. ಚಂದ್ರಶೇಖರ್-ಗಿರೀಶ್ ಕಾರ್ಗದ್ದೆ ಪ್ರಥಮ, ಎಂ.ಎಸ್.ಅಮೃತ-ಚಿತ್ರಶ್ರೀ ದ್ವಿತೀಯ ಹಾಗೂ ಎಂ.ಕೆ.ನಿಸರ್ಗ ಹಾಗೂ ಯಶ್ವಂತ್ ತೃತೀಯ ಸ್ಥಾನ ಪಡೆದರು. ಮಕ್ಕಳ ವಿಭಾಗದಲ್ಲಿ ವೈ.ವಿ.ಪ್ರಣತಿ-ಅದ್ವಿತಾ ದೀಪಕ್, ದ್ವಿತೀಯ ಸ್ಥಾನವನ್ನು ದುಶ್ಯಂತ್, ಕರಣ್‌ಗೌಡ, ತೇಜಸ್ ಗೌಡ, ತೃತೀಯ ಬಹುಮಾನವನ್ನು ವೈ.ವಿ.ವಿಹಾನ್, ಎಂ.ಜೇಸ್ಥಾ, ಅದಿತನ್ ಪಡೆದರು.

### ಪ್ರದೀಪ್ ಕೆಂಜಿಗೆ ಜೊತೆ ಸಂವಾದ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಅಧ್ಯಕ್ಷ ಹಾಗು ಲೇಖಕ ಡಾ. ಪ್ರದೀಪ್ ಕೆಂಜಿಗೆ ಅವರು ತಮ್ಮ ಭಾಷಣದಲ್ಲಿ ತೇಜಸ್ವಿ ಅವರ ಒಡನಾಟದ ಕುರಿತು ಮಾಹಿತಿ ಹಂಚಿಕೊಂಡರು. ತೇಜಸ್ವಿ ಅವರ ಪರಿಚಯದ ಸಂದರ್ಭ, ಆ ಮೇಲೆ ನಡೆದ ಘಟನಾವಳಿಗಳನ್ನು ಹೇಳಿದರು. ತೇಜಸ್ವಿ ಅಭಿಮಾನಿಗಳು ಕೇಳಿದ ಸೂಕ್ಷ್ಮ ಪ್ರಶ್ನೆಗಳಿಗೆ ಉತ್ತರಿಸಿದರು.

ಕರ್ವಾಲೋ ಕಾದಂಬರಿ ಪೂರ್ಣ ಕಾಲ್ಪನಿಕವಲ್ಲ. ಪಾತ್ರಧಾರಿಗಳಾದ ಎಂಗ್ಟ, ಬಿರಿಯಾನಿ ಕರಿಯಪ್ಪ ಇದ್ದವರು. ಆದರೆ ಕರ್ವಾಲೋ ಪಾತ್ರ ಸೃಷ್ಟಿ ಕಾಲ್ಪನಿಕ ಇರಬಹುದು. ಕಥೆಯ ಕೇಂದ್ರಬಿಂದು ಕರ್ವಾಲೋ ಅವರೇ ಆಗಿದ್ದರಿಂದ ಹಾಗು ಇತರ ಪಾತ್ರಗಳು ಕಥೆಗೆ ಅವಶ್ಯವಾದ್ದರಿಂದ ಎಷ್ಟು ಬೇಕೋ ಅಷ್ಟನ್ನು ಮಾತ್ರ ಓದುಗರು ಅರಿತರೆ ಸಾಕೆಂಬುದು ತೇಜಸ್ವಿ ಅವರ ನಿಲುವಾಗಿತ್ತು ಎಂದರು.

# ಗಮನ ಸೆಳೆಯುತ್ತಿವೆ ವಿಘ್ನ ನಿವಾರಕನ ಮೂರ್ತಿಗಳು

## ಜೇಡಿ ಮಣ್ಣಿನಿಂದ ಪರಿಸರ ಸ್ನೇಹಿ ಮೂರ್ತಿ ತಯಾರು | 250 ರಿಂದ 35 ಸಾವಿರ ರೂ. ವರೆಗೆ ಬೆಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಿಂದೂ ಸಾಂಪ್ರದಾಯಿಕ ಹಬ್ಬ ಗಣೇಶ ಚತುರ್ಥಿ ಸಮೀಪಿಸುತಿದ್ದಂತೆಯೇ ವಿಶೇಷ ಹಾಗೂ ವಿಶಿಷ್ಟ ಶೈಲಿ ಹಾಗೂ ತರಾವರಿ ಮಾದರಿಯ ಗೌರಿ-ಗಣೇಶ ಮೂರ್ತಿಗಳು ತಯಾರಾಗಿ ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವುದು ವಿಶೇಷ.

ಪಿಒಪಿ ಹಾಗೂ ಇತರೆ ಕೆಮಿಕಲ್ ಬಳಕೆಯಿಂದ ಮೂರ್ತಿಗಳನ್ನು ತಯಾರು ಮಾಡುವುದು ಮತ್ತು ಬಳಕೆ ಮಾಡುವುದನ್ನು ಸರ್ಕಾರ ನಿಷೇಧಿಸಿದ್ದು ಪರಿಸರ ಸ್ನೇಹಿ ಮೂರ್ತಿಗಳನ್ನು ಪೂಜಿಸುವಂತೆ ಆದೇಶಿಸಿರುವ ಹಿನ್ನೆಲೆ ಮಣ್ಣಿನಿಂದ ಮಾಡಿರುವ ಗೌರಿ-ಗಣೇಶ ಮೂರ್ತಿಗಳಿಗೆ ಹೆಚ್ಚಿನ ಬೇಡಿಕೆ ಇದೆ.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಕಲಾವಿದ ಎಸ್.ಆರ್.ಮೋಹನ್ ಅವರು ಕಳೆದ 2 ತಿಂಗಳಿಂದ ವಿಶೇಷ ಹಾಗೂ ವಿಶಿಷ್ಟ ಶೈಲಿಯ ಗೌರಿ ಹಾಗೂ ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಸುಮಾರು 25 ವರ್ಷಗಳಿಂದ ಗಣೇಶ ಮೂರ್ತಿ ತಯಾರಿಕೆಯನ್ನೇ ಕಾಯಕ ಮಾಡಿ



ಕೊಂಡಿರುವ ಶಿಲ್ಪಿ ಎಸ್.ಆರ್.ಮೋಹನ್ ಅವರು ತಯಾರಿಸಿರುವ ಗೌರಿ-ಗಣೇಶ ಮೂರ್ತಿಗಳು ಮಂಡ್ಯ, ನಾಗಮಂಗಲ, ತುಮಕೂರು, ತುರುವೇಕೆರೆ, ಹೊಳೆನರಸೀಪುರ ಹಾಗೂ ಅರಸೀಕೆರೆ ಸೇರಿದಂತೆ ಹೊರ ರಾಜ್ಯ ಆಂದ್ರ ಪ್ರದೇಶಕ್ಕೂ ಕೊಂಡೊಯ್ದಿರುವುದು ವಿಶೇಷವಾಗಿದೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಕೆರೆಯಿಂದ 25 ಸಾವಿರ ರೂ. ಮೌಲ್ಯದ ಒಂದು ಟಿಪ್ಪರ್ ಲೋಡ್ ಜೇಡಿ ಮಣ್ಣು ತರಿಸಿದ್ದು ತನ್ನ ಕುಟುಂಬದ ಸದಸ್ಯರ ಸಹಕಾರದೊಂದಿಗೆ ಗೌರಿ-ಗಣೇಶ ಮೂರ್ತಿಗಳ ತಯಾರಿಕೆ ನಡೆಯುತ್ತಿದೆ. ಈಗಾಗಲೇ ಸುಮಾರು 35 ಮೂರ್ತಿಗಳು ಮಾರಾಟವಾಗಿದ್ದು 65 ಕ್ಕೂ ಹೆಚ್ಚು ಮೂರ್ತಿಗಳಿಗೆ ಸಾರ್ವಜನಿಕರು ಮುಂಗಡ ಹಣ ಪಾವತಿಸಿದ್ದಾರೆ ಎಂದು ಕಲಾವಿದ ಮೋಹನ್ ತಿಳಿಸಿದರು.

ಒಂದು ಅಡಿಯಿಂದ ಗ್ರಾಹಕರ ಬೇಡಿಕೆಯಂತೆ ಸುಮಾರು 12 ಅಡಿ ಎತ್ತರದ ಮೂರ್ತಿಗಳು ಇವರ ಕೈಚಳಕದಲ್ಲಿ ಮೂಡಿ ಬಂದಿವೆ. ಪ್ರಾರಂಭವಾಗಿ 250 ರೂ. ನಿಂದ 30 ಸಾವಿರ ರೂ. ವರೆಗಿನ ಬೆಲೆಯ ಮೂರ್ತಿಗಳು ಇವರಲ್ಲಿ ದೊರೆಯಲಿವೆ.

ಪ್ರತಿವರ್ಷ 250 ರಿಂದ 300ಕ್ಕೂ ಹೆಚ್ಚು ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ವಿಭಿನ್ನ ಶೈಲಿಯ ಮೂರ್ತಿಗಳು ಲಭ್ಯವಿರುವುದರಿಂದ ವರ್ಷದಿಂದ ವರ್ಷಕ್ಕೆ ನಾವು ತಯಾರಿಸುವ ಮೂರ್ತಿಗಳಿಗೆ ಬೇಡಿಕೆ ಹೆಚ್ಚುತ್ತಿದೆ ಎಂದು ಶಿಲ್ಪಿ ಎಸ್.ಆರ್.ಮೋಹನ್ ಮಾಹಿತಿ ನೀಡಿದರು.

ಮೂರ್ತಿಗಳ ತಯಾರಿಕೆಗೆ ಹದವಾದ ಜೆಡಿಮಣ್ಣು ಮೊದಲೆಲ್ಲ ಚನ್ನರಾಯಪಟ್ಟಣ ತಾಲೂಕು ವ್ಯಾಪ್ತಿಯ ಕೆಲವೇ ಕೆಲ ಕೆರೆಗಳಲ್ಲಿ ಸಿಗುತಿತ್ತು.

ಆದರೆ ಏತನೀರಾವರಿ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ವಿಚಾರ ತಿಳಿದು ರೈತರು ಜೆಸಿಬಿ ಯಂತ್ರ ಬಳಕೆ ಮಾಡಿಕೊಂಡು ಟ್ರಾಕ್ಟರ್‌ಗಳ ಮೂಲಕ ಕೆರೆಗಳ ಮೇಲ್ಮಣ್ಣನ್ನು ಸಂಪೂರ್ಣವಾಗಿ ಹೂಳು ತೆಗೆದು ಕೃಷಿ ಜಮೀನುಗಳಿಗೆ ಸಾಗಿಸಲಾಗಿದೆ.

ಜತೆಗೆ ಕಳೆದ 2-3 ವರ್ಷಗಳಿಂದ ವ್ಯಾಪ್ತಿಯ ಬಹುತೇಕ ಕೆರೆಗಳಿಗೆ ನೀರು ತುಂಬಿಸಲಾಗಿದ್ದು ಅಲ್ಲದೆ ಕಳೆದ ವರ್ಷ ಹೆಚ್ಚು ಮಳೆ ಸುರಿದಿದ್ದರಿಂದ ತುಂಬಿದ ಕೆರೆಗಳಲ್ಲಿ ನೀರಿನ ಪ್ರಮಾಣ ಇನ್ನೂ ಕಡಿಮೆಯಾಗಿಲ್ಲ. ಆದ್ದರಿಂದ ಸದ್ಯಕ್ಕೆ ಸ್ಥಳೀಯವಾಗಿ ಉತ್ತಮ ಮಣ್ಣು ಲಭ್ಯವಾಗದ ಕಾರಣ ಹೊರ ಜಿಲ್ಲೆಗಳಿಂದ ತರಿಸುವುದು ಸ್ವಲ್ಪ ದುಬಾರಿ ಎನ್ನಲಾಗಿದೆ. ಈಗಾಗಲೇ ಸಿದ್ದಗೊಂಡಿರುವ ಗೌರಿ-ಗಣೇಶ ಮೂರ್ತಿಗಳು ಮಾರುಕಟ್ಟೆಗೆ ಆಗಮಿಸುತಿದ್ದು ಎಲ್ಲೆಡೆ ಮೂರ್ತಿಗಳು ಲಭ್ಯವಾಗಲಿವೆ.

ಪಿಒಪಿ ಮೂರ್ತಿ ಮಾರಾಟಕ್ಕೆ ಬೀಳಲಿ ಬ್ರೇಕ್: ಪಿಒಪಿ ಹಾಗೂ ಹಾನಿಕಾರಕ ಬಣ್ಣ ಹಾಗೂ ಇತರೆ ವಸ್ತುಗಳಿಂದ ಮೂರ್ತಿಗಳನ್ನು ತಯಾರಿಸದಂತೆ ನಿಷೇಧಿಸಿದ್ದರೂ ಈ ಧಂದೆ ನಿಂತಿಲ್ಲ. ಈಗಾಗಲೇ ಪಿಒಪಿ ಯಿಂದ ತಯಾರಿಸಿರುವ ಮೂರ್ತಿಗಳು ಮಾರುಕಟ್ಟೆಗಳಿಗೆ ಲಗ್ಗೆ ಇಟ್ಟಿದ್ದು ಸಂಬಂದಪಟ್ಟ ಇಲಾಖೆ ಅಧಿಕಾರಿಗಳು ಕಡಿವಾಣ ಹಾಕುವಲ್ಲಿ ಮುಂದಾಗಬೇಕು ಎಂಬುದು ಪರಿಸರ ಪ್ರೇಮಿ ಚಾ.ನಾ.ಅಶೋಕ್ ಅವರ ಮನವಿಯಾಗಿದೆ.

# ಜಿಲ್ಲಾಧಿಕಾರಿ ನೂತನ ಕಚೇರಿ 6 ತಿಂಗಳಲ್ಲಿ ಉದ್ಘಾಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾಧಿಕಾರಿ ನೂತನ ಕಚೇರಿಯನ್ನು ಆರು ತಿಂಗಳಲ್ಲಿ ಉದ್ಘಾಟಿಸಬೇಕಿದ್ದು, ಬಾಕಿ ಕಾಮಗಾರಿಯನ್ನು ಅಷ್ಟರೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶುಕ್ರವಾರ ಸಂಜೆ ನಿರ್ಮಾಣ ಹಂತದ ಕಟ್ಟಡ ಪರಿಶೀಲಿಸಿದ ಅವರು, ಕಾಮಗಾರಿಗೆ ಹೆಚ್ಚುವರಿ ಅನುದಾನ ನೀಡಲು ಸಾಧ್ಯವಿಲ್ಲ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಟ್ಟಡ ಕೆಡವಲು ಟೆಂಡರ್ ಕರೆಯಬೇಕು. ಅದೊಂದು ಬಿಟ್ಟು ಬೇರೆ ಯಾವ ಕೆಲಸಕ್ಕೂ ಅನುದಾನ ನೀಡುವುದಿಲ್ಲ. ಮುಂದಿನ ವಾರ ಅಗತ್ಯ ದಾಖಲೆಗಳೊಂದಿಗೆ ಬೆಂಗಳೂರಿಗೆ ಬಂದು ನನ್ನನ್ನು ಭೇಟಿಯಾಗಬೇಕು. ತ್ವರಿತಗತಿಯಲ್ಲಿ ಕೆಲಸ ಮಾಡುವ ಗುತ್ತಿಗೆದಾರನಿಗೆ ಜವಾಬ್ದಾರಿ ವಹಿಸಿ ಆದಷ್ಟು ಬೇಗ ಕೆಲಸ ಮುಗಿಸಬೇಕೆಂದು ಲೋಕೋಪಯೋಗಿ ಇಲಾಖೆ ಇಇ ಜಯಣ್ಣ ಅವರಿಗೆ ಸೂಚಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು, ನೂತನ ಜಿಲ್ಲಾಧಿಕಾರಿ ಕಚೇರಿಯನ್ನು ಮುಂದಿನ ಆರು ತಿಂಗಳಲ್ಲಿ ಉದ್ಘಾಟಿಸಲಾಗುವುದು. ವಿಧಾನಸೌಧ ಮಾದರಿಯಲ್ಲಿ ಸ್ವಾಗತ ಕಮಾನು ನಿರ್ಮಾಣವಾಗಬೇಕೆಂದು ಸೂಚಿಸಿದ್ದೇನೆ ಎಂದರು.

# ಸಾನ್ವಿ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳ ಸಾಧನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಹೆತ್ತೂರು ಸಾನ್ವಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 202627ನೇ ಸಾಲಿನ ಹೆತ್ತೂರು ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ವಿವಿಧ ಅಥ್ಲೆಟಿಕ್ಸ್ ಹಾಗೂ ಗುಂಪು ಕ್ರೀಡೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಆ. 24 ಮತ್ತು 25ರಂದು ನಡೆದ ಕೆಪಿಎಸ್ ಹೆತ್ತೂರು ಕ್ರೀಡಾಂಗಣ ಹಾಗೂ ಮಲ್ಲೇಶ್ವರ ಹೈಸ್ಕೂಲ್ ಕ್ರೀಡಾಂಗಣದಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾಗವಹಿಸಿ ಹಲವು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಆರೂಹಿ 100 ಮೀ. ಓಟದಲ್ಲಿ ಪ್ರಥಮ ಹಾಗೂ ಲಾಂಗ್ ಜಂಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವೈ.ಬಿ. ಮೋಕ್ಷಾ ಲಾಂಗ್ ಜಂಪ್‌ನಲ್ಲಿ ಪ್ರಥಮ ಹಾಗೂ 100 ಮೀ. ಓಟದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಸಮನ್ವಿ ಹೈಜಂಪ್‌ನಲ್ಲಿ ಪ್ರಥಮ, ವೇದಶ್ರೀ ಡಿಸ್ಕಸ್ ಥ್ರೋ ಹಾಗೂ ಶಾಟ್‌ಪುಟ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಶಿವರಾಜ್ 100 ಮೀ. ಓಟದಲ್ಲಿ ಪ್ರಥಮ ಹಾಗೂ ಲಾಂಗ್ ಜಂಪ್‌ನಲ್ಲಿ ದ್ವಿತೀಯ ಸ್ಥಾನ, ಅದ್ವೈತ್ ಹೈಜಂಪ್‌ನಲ್ಲಿ ಪ್ರಥಮ ಸ್ಥಾನ ಪಡೆದರೆ, ಯಶವಂತ್ 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ತನ್ಮಯಿ ಶಾಟ್‌ಪುಟ್‌ನಲ್ಲಿ ದ್ವಿತೀಯ, ವರ್ಷಿಣಿ ಹಾಗೂ ಚಿರಂತ್‌ರಾಜ್ ಡಿಸ್ಕಸ್ ಥ್ರೋನಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

### ಗುಂಪು ಕ್ರೀಡೆಗಳಲ್ಲೂ ಸಾಧನೆ

ಬಾಲಕಿಯರ ಥ್ರೋಬಾಲ್ ಹಾಗೂ ಕಬಡ್ಡಿ ತಂಡಗಳು ಪ್ರಥಮ ಸ್ಥಾನ ಪಡೆದಿವೆ. ಬಾಲಕಿಯರ ರಿಲೇ ತಂಡ ದ್ವಿತೀಯ ಹಾಗೂ ಬಾಲಕರ ಥ್ರೋಬಾಲ್ ತಂಡ ತೃತೀಯ ಸ್ಥಾನ ಪಡೆದುಕೊಂಡಿದೆ.

ಹೈಸ್ಕೂಲ್ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ ಎಚ್.ಸಿ.ಮನನ್ ಹೈಜಂಪ್ ಹಾಗೂ ರಚನಾ ಎಂ.ಆರ್. ಹ್ಯಾಮರ್ ಥ್ರೋನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮೇಘರಾಜು ಹೈಜಂಪ್‌ನಲ್ಲಿ ದ್ವಿತೀಯ, ದೀಪಾಲಿ ಜಾವೆಲಿನ್ ಥ್ರೋನಲ್ಲಿ ತೃತೀಯ, ಚಿನ್ಮಯಿ ಎಲ್.ಜೆ. 200 ಮೀ. ಓಟದಲ್ಲಿ ಹಾಗೂ ಹೇಮಲತಾ ಎಚ್.ಕೆ. ಹ್ಯಾಮರ್ ಥ್ರೋನಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

# ಹೆಬ್ಬಾಳು ಏತ ನೀರಾವರಿ ಯೋಜನೆ ಅನುಷ್ಟಾನಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಹೆಬ್ಬಾಳು ಏತ ನೀರಾವರಿ ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಿ ಎಂಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ 61 ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು ಎಂದು ವಾಲ್ಮೀಕಿ ಸಂಘದ ಜಿಲ್ಲಾಧ್ಯಕ್ಷ ಮಧು ನಾಯಕ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಬರಗಾಲ ಆವರಿಸಿದ್ದು, 1000 ಅಡಿ ಆಳಕ್ಕೆ ಕೊಳವೆ ಬಾವಿ ಕೊರೆದರೂ ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆರೆ-ಕಟ್ಟೆಗಳು ಬತ್ತಿ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವುದೂ ಕಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಸ್ಪಂದಿಸಿ ಹೆಬ್ಬಾಳು ಏತ ನೀರಾವರಿ ಯೋಜನೆಗೆ ಅಗತ್ಯ ಕ್ರಮ ಕೈಗೊಂಡು ಕಾಮಗಾರಿ ಪೂರ್ಣಗೊಳಿಸಬೇಕು. ಜೊತೆಗೆ ಬೇಲೂರು ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಒತ್ತಾಯಿಸಿದರು.

ಹೆಬ್ಬಾಳು ಗ್ರಾಮದ ಗ್ರಾಮಸ್ಥ ಉಮಾಶಂಕರ ಮಾತನಾಡಿ, ತಾಲೂಕಿನ ಎಂಟು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 61 ಕೆರೆಗಳಿಗೆ ನೀರು ತುಂಬಿಸುವ ಬೇಡಿಕೆ ಮುಂದಿಟ್ಟುಕೊಂಡು ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ನೀರಾವರಿ ಹೋರಾಟ ನಡೆಸಲಾಗುತ್ತಿದೆ. ಇದು ಯಾವುದೇ ವ್ಯಕ್ತಿ ಅಥವಾ ರಾಜಕೀಯ ನಾಯಕರ ಪ್ರತಿಷ್ಠೆಯ




ಹೋರಾಟವಲ್ಲ. ರೈತರ ಹಿತದೃಷ್ಟಿಯಿಂದ ನಡೆಯುತ್ತಿರುವ ಹೋರಾಟವಾಗಿದೆ ಎಂದರು.

ತಾಲೂಕಿನಲ್ಲಿ ಬರದ ತೀವ್ರತೆ ಹೆಚ್ಚುತ್ತಿದ್ದು, ಜಲಮೂಲಗಳು ದಿನದಿಂದ ದಿನಕ್ಕೆ ಬತ್ತಿಹೋಗುತ್ತಿವೆ. ಈ ಹಿನ್ನೆಲೆಯಲ್ಲಿ ಶಾಸಕರು ಸೇರಿ ತಾಲೂಕಿನ ಎಲ್ಲಾ ಜನಪ್ರತಿನಿಧಿಗಳು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಂದಾಗಿ ಸರ್ಕಾರದ ಗಮನ ಸೆಳೆಯಬೇಕು. ಎಲ್ಲರೂ ಒಗ್ಗಟ್ಟಿನಿಂದ ನೀರಾವರಿ ಸಚಿವರನ್ನು ಭೇಟಿ ಮಾಡಿ ಹೆಬ್ಬಾಳು ಏತ ನೀರಾವರಿ ಯೋಜನೆಯನ್ನು ಕೂಡಲೇ ಅನುಷ್ಟಾನಕ್ಕೆ ತರುವಂತೆ ಒತ್ತಡ ಹೇರಬೇಕು ಎಂದು ಮನವಿ ಮಾಡಿದರು.

ಹೋರಾಟವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ವ್ಯವಸ್ಥಿತವಾಗಿ ನಡೆಸುವ ಉದ್ದೇಶದಿಂದ ಸಮಿತಿಯನ್ನು ರಚಿಸಲಾಗುವುದು. ಎಂಟು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ರೈತರು, ಗ್ರಾಮಗಳ ಪ್ರಮುಖರು ಹಾಗೂ ವಿವಿಧ ಸಂಘಟನೆಗಳ ಮುಖಂಡರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿ ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು. ಬಳಿಕ ನಿಯೋಗದ ಮೂಲಕ ನೀರಾವರಿ ಸಚಿವರನ್ನು ಭೇಟಿ ಮಾಡಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಹನಿಕೆ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಮಾತನಾಡಿ, ಎತ್ತಿನಹೊಳೆ ಯೋಜನೆಯ ಸುತ್ತಮುತ್ತಲಿನ ಎರಡು-ಮೂರು ಕಿ.ಮೀ. ವ್ಯಾಪ್ತಿಯಲ್ಲೇ ನಮ್ಮ ಗ್ರಾಮಗಳಿವೆ. ಎತ್ತಿನಹೊಳೆ ಯೋಜನೆಗಾಗಿ ಈ ಭಾಗದ ರೈತರು ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಆದರೆ ಇದುವರೆಗೂ ಯೋಜನೆಯ ಲಾಭ ನಮ್ಮ ಎಂಟು ಪಂಚಾಯಿತಿಗಳ ವ್ಯಾಪ್ತಿಯ ಜನರಿಗೆ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎತ್ತಿನಹೊಳೆ ನೀರನ್ನು ಹೊಳೆನರಸೀಪುರ, ಅರಸೀಕೆರೆ, ಚಿಕ್ಕಮಗಳೂರು ಸೇರಿದಂತೆ ವಿವಿಧ ಪ್ರದೇಶಗಳಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ. ಆದರೆ ಯೋಜನೆಗಾಗಿ ಜಮೀನು ಕಳೆದುಕೊಂಡಿರುವ ಭಾಗದ ಜನರಿಗೆ ಮೊದಲು ನೀರು ದೊರೆಯಬೇಕಾಗಿತ್ತು. ಇನ್ನಾದರೂ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಹೆಬ್ಬಾಳು ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಕೆರೆ-ಕಟ್ಟೆಗಳಿಗೆ ನೀರು ತುಂಬಿಸಬೇಕು ಎಂದು ಆಗ್ರಹಿಸಿದರು.

ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಇಸ್ಮಾಯಿಲ್, ರಾಕೇಶ್, ರಘು ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-13

1500: ಪೋರ್ಚುಗೀಸ್ ನಾವಿಕ ಪೆದ್ರೊ ಅಲ್ವಾರೆಸ್ ಕಬ್ರಾಲ್ ಕೇರಳಕ್ಕೆ ಆಗಮಿಸಿ ಭಾರತದಲ್ಲಿ ಮೊದಲ ಯುರೋಪಿಯನ್ ವ್ಯಾಪಾರ ಕೇಂದ್ರ ಸ್ಥಾಪಿಸಿದ.

1845: ವಿಜ್ಞಾನಿ ಮೈಕೆಲ್ ಫ್ಯಾರಡೆ ಕಾಂತ ಕ್ಷೇತ್ರವು ಧ್ರುವೀಕೃತ ಬೆಳಕಿನ ಮೇಲೆ ಬೀರುವ ಪರಿಣಾಮವನ್ನು ಕಂಡುಹಿಡಿದರು. ಇದನ್ನು ಫ್ಯಾರಡೆ ಪರಿಣಾಮ ಎಂದು ಕರೆಯಲಾಗುತ್ತದೆ.

1929: ಸ್ವಾತಂತ್ರ್ಯ ಹೋರಾಟಗಾರ ಜತೀಂದ್ರನಾಥ ದಾಸ್ ಅವರು ಲಾಹೋರ್ ಜೈಲಿನಲ್ಲಿ 63 ದಿನಗಳ ಉಪವಾಸ ಸತ್ಯಾಗ್ರಹದ ಬಳಿಕ ನಿಧನರಾದರು.

1948: ಹೈದರಾಬಾದ್ ಸಂಸ್ಥಾನವನ್ನು ಭಾರತೀಯ ಒಕ್ಕೂಟಕ್ಕೆ ವಿಲೀನಗೊಳಿಸುವ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆ ಮುಂದುವರಿಯಿತು.

1993: ಇಸ್ರೇಲ್ ಪ್ರಧಾನಿ ಯಿತ್ಜಾಕ್ ರಾಬಿನ್ ಮತ್ತು ಪ್ಯಾಲೆಸ್ಟೈನ್ ಮುಕ್ತಿಗೊಳಿಸುವ ಸಂಘಟನೆಯ ಅಧ್ಯಕ್ಷ ಯಾಸರ್ ಅರಾಫತ್ ಅವರು ಅಮೆರಿಕದ ಶ್ವೇತಭವನದಲ್ಲಿ ಒಸ್ಲೋ ಒಪ್ಪಂದಕ್ಕೆ ಸಹಿ ಹಾಕಿದರು.

2007: ವಿಶ್ವಸಂಸ್ಥೆಯ ಮಹಾಸಭೆ ಸ್ಥಳೀಯ ಮೂಲ ನಿವಾಸಿಗಳ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು.

2008: ದೆಹಲಿಯಲ್ಲಿ ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿ 30 ಮಂದಿ ಮೃತಪಟ್ಟಿದ್ದು, 130 ಮಂದಿ ಗಾಯಗೊಂಡರು.

**ಜನನ**

1916: ಪ್ರಸಿದ್ಧ ಸಾಹಿತಿ ರೋ ಆಲ್ಡ್ ಡಾಲ್

1969: ಆಸ್ಟ್ರೇಲಿಯಾದ ಖ್ಯಾತ ಕ್ರಿಕೆಟಿಗ ಶೇನ್ ವಾರ್ನ್

1989: ಜರ್ಮನಿಯ ಫುಟ್ಬಾಲ್ ಆಟಗಾರ ಥಾಮಸ್ ಮುಲ್ಲರ್

**ಮರಣ**

1929: ಕ್ರಾಂತಿಕಾರಿ ಜತೀಂದ್ರನಾಥ ದಾಸ್

1996: ಅಮೆರಿಕದ ಪ್ರಸಿದ್ಧ ರ್‍ಯಾಪರ್ ಟುಪಾಕ್ ಶಕುರ್

# ಬೇಳೇಸಾರೆಂತಕೆ, ......ತೊಳಿಯಕಾ– 4

**ಧನಂಜಯ ಜೀವಾಳ ಬಿ.ಕೆ.**

ನಾವು ಏನನ್ನು ಅರ್ಥ ಮಾಡಿಕೊಳ್ಳಲಾರೆವೋ ಅದನ್ನು ನಾವು ನಿಯಂತ್ರಿಸಲಾಗದೆಂಬ ನಿತ್ಯ ಸತ್ಯ ಬೋಬಯ್ಯನ ಮುಂದೆ ಅನಾವರಣವಾಗುತ್ತಾ ಬಲಾಢ್ಯರ ಮುಂದೆ ಆತ್ಮಗೌರವ, ಸ್ವಾವಲಂಬನೆ ಹಾಗೂ ಸ್ವಾಭಿಮಾನದಿಂದ ಬದುಕುವುದು ಎಷ್ಟು ಸವಾಲಿನದೆಂದು ಯೋಚಿಸುತ್ತಾ ಈ ಸಮಸ್ಯೆಯೆಂಬ ಹರಿಯುವ ನೀರ ಮೇಲೆ ನಡೆಯಲು ಕಲ್ಲುಗಳೆಲ್ಲೆಲ್ಲಿವೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಲು ನಿರ್ಧರಿಸಿದ.

ದುರ್ಬಲರ ಮೇಲಿನ ದುರ್ಜನರ ದರ್ಪ ಇಂದು ನೆನ್ನೆಯದಲ್ಲ. ನಾಳೆಗೆ ಮುಗಿಯುವುದೂ ಇಲ್ಲ ಇದು ತಲತಲಾಂತರದ್ದು. ಸಾಧ್ಯವಿದ್ದಷ್ಟರ ಮಟ್ಟಿಗೆ ಶಾಂತಿ ಆದರೆ ಯಾವುದೇ ಕಾರಣಕ್ಕೂ ಅನ್ಯಾಯಕ್ಕೊಳಗಾಗದೇ ಇರಲು ದೃಢ ನಿರ್ಧಾರ ಮಾಡಿದ ಬೋಬಯ್ಯ.

ಸಂಜೆಯ ಮಬ್ಬುಗತ್ತಲಿನ ಸಮಯದಲ್ಲಿ ಬೋಬಯ್ಯ ಅಶ್ವತ್ತುನ್ಕಟ್ಟೆ ಬಳಿಗೆ ನಿಧಾನವಾಗಿ ನಡೆದುಕೊಂಡು ಹೋದ. ಮನೆಯಿಂದ ಒಂದೂವರೆ ಮೈಲಿ ದೂರದ ಅಶ್ವತ್ತುನ್ಕಟ್ಟೆಗೆ ಹೋಗಬೇಕಾದರೆ ಜಟಕಿನ ಬನ ಮತ್ತು ಊರಬಾಗಿಲು ದಾಟಿ ಹೋಗಬೇಕಿತ್ತು.

ದಾರಿಯಲ್ಲಿ ಎದುರಿಗೆ ಮಿಲ್ಟ್ರಿ ಅಪ್ಪಣ್ಣ ಸಿಕ್ಕಿದ. ಬೆಳಗಿನಿಂದ ತೋಟದಲ್ಲಿ ಮೈಮುರಿದು ದುಡಿದ ಅಪ್ಪಣ್ಣ ಸಂಜೆ ಸುಮಾರಿಗೆ ಎರಡಾಳು ಹೊರುವಂಥ ಸೌದೇ ಹೊರೆಯನ್ನು ಲೀಲಾಜಾಲವಾಗಿ ತಲೆ ಮೇಲೆ ಹೊತ್ತುಕೊಂಡು, ಆ ಸೌದೆ ಹೊರೆಮೇಲೆ ಮೂವತ್ನಲ್ವತ್ತು ಕೆಸಿನೆಲೆಗಳ ಪಿಂಡಿ, ಗಾಳಿಗುರುಳಿ ಬಿದ್ದಿದ್ದ ಬಾಳೆಗೊನೆಯೊಂದನ್ನು ಹಿಡಿದು, ಒಡ್ಯಾಣದಲ್ಲಿ ಬಟ್ಗತ್ತಿಯ ಸಿಕ್ಕಿಸಿಕೊಂಡು ಬಿರಬಿರನೆ ಮನೆಕಡೆಗೆ ನಡೀತಿದ್ದ. ಎದುರಿಗೆ ಸಿಕ್ಕಿದ ಬೋಬಯ್ಯನನ್ನು ನೋಡಿ ಆಏನೋಯ್ ಬೋಬಣ್ಣಾ, ಯತ್ಲಗೆ ಹೊಂಟ್ರಿಟಿ ಎಂದ. ಬೀಡಿ ಮುಗ್ದೋಗಿದ್ವು ಮಾರಾಯ, ನಾಗೇಸುನ್ ಅಂಗ್ಡೀಲಿ ತರಾನಂತ ಹೊರ್ಟೆ ಎಂದ ಬೋಬಯ್ಯ.



ರಾಮಯ್ಯನ ಮನೆ ಅಡಿಕೆ ತೋಟದ ಕೆಲಸ ಮುಗಿಸಿಕೊಂಡು ಮನೆ ಕಡೆಗೆ ಹೊರಟಿದ್ದ ಕಾಲನಿಯ ಕೆಂಚಿ, ಬೆಳ್ಳಿ, ಗೌರಿ, ಮಂಜಿಯರು ಆಏನಿ ಬೋಬಣ್ಣರೇ, ದೇವಕಿಯಮ್ಮರು ಚೆನಾಗಿದಾರಾ?ಟಿ ಎಂದು ಕುಶಲೋಪರಿ ವಿಚಾರಿಸಿದರು. ಹೂ ಕಣ್ರಾ; ಚೆನಾಗಿದಾಳೆ. ಒಗ್ಗಿನ ಮಡಿ ಮೊಳಕೆ ಚೆನಾಗಿ ಬಂದಾವೆ, ಬುಟ್ಟಿಗೆ ಕೂರುಸ್ಬೇಕು. ಕಾಡ್ಮಣ್ಣು ಎರಡ್ಗಾಡಿ ತರಿಸಿಟ್ಟೀನಿ, ಕಾಫಿ ಬುಟ್ಟಿ ತುಂಬ್ಸಕ್ಕೆ ಆಯ್ತಾರ ಬರ್‍ರಾ ಎಂದು ಕೆಲಸವನ್ನು ನೆನಪಿಸಿದ.

**ಗ್ರಾಮಾಯಣ-2**

ದಾರಿಯುದ್ದಕ್ಕೂ ಇಷ್ಟೆಲ್ಲಾ ಮಾತುಕತೆ ನಡೆಯುತಿದ್ದರೂ, ಬೋಬಯ್ಯನ ತಲೆಯಲ್ಲಿ ರಸ್ತೆ ನೆಪದಲ್ಲಿ ತನ್ನನ್ನು ಒಕ್ಕಲೆಬ್ಬಿಸಲು ಬಂದಿದ್ದ ಷಣ್ಮುಖನನ್ನು ಹೇಗೆ ಮುರಿಯಬೇಕೆಂಬ ಆಲೋಚನೆಯೇ ಮುಳುಗೇಳಿ ಮಾಡುತಿತ್ತು.

ಅಶ್ವತ್ತನ್ಕಟ್ಟೆ ಬಳಿ ಅಂದು ಎಂದಿನಂತೆ ಜನಸಂದಣಿ ಇರಲಿಲ್ಲ. ಆರೇಳು ಜನ ಗಟ್ಟಿದನಿಯಲ್ಲಿ ಮಾತನಾಡುತಿದ್ದವರು ಬೋಬಯ್ಯನ ಪ್ರವೇಶವಾದೊಡನೆ ದನಿತಗ್ಗಿಸಿ ಏನನ್ನೋ ಮುಚ್ಚಿಡುವಂತೆ ಮಾತನ್ನು ಮುಂದುವರೆಸಿದರು. ಗುಂಪಿನ ನಡುವೆಯಿದ್ದ ದಿಬ್ಬ, ಬೋಬಯ್ಯನ ಇರುವಿಕೆಯನ್ನು ಗಮನಿಸದೇ ಆಅದೇನ್ ತರ್ಕಂತಾರೋ ತರ್ಕ್ಳಿ, ಈ ಸಲ ನಿಶಾನೆಗೆ ಹೋಗಕ್ಕೂಡದು ಅಂದ್ರೆ ಹೋಗಕ್ಕೇಕೂಡ್ದು. ಅದೆಲ್ಲಿಂದ ತರ್‍ಸ ಕಂತಾರೊ ತರುಸ್ಕಳ್ಳಿ. ಈತ್ರುಗಳು, ಸುಗ್ಗಿ ಹಬ್ಬ ಕುಣಿಯಕ್ಕೆ ನಾವು ಹಲಗೇ ಬಡೀಬೇಕಾ? ನಮ್ಮೋರು ಊರೊಳಗೆ ಹೋಗಕ್ಕೂಡ್ದಂತೆ, ದೇವ್ರ್ ತರಕ್ಕೆ ನಮ್ಮ ನಿಶಾನಿ ಬೇಕಂತೆ. ಆಏ ರಂಗಾ, ನಿಮ್ಮಯ್ಯರಿಗೆ ಹೇಳು, ಹಲ್ಗೇ ಬಡಿಯಕ್ಕೆ ಹೋಗಕ್ಕೂಡ್ದೂ ಅಂತ. ಸುಬ್ಬಾ, ನೀನು ಕಾಳೆ ಊದಂಗಿಲ್ಲ. ನಮ್ಮಣಯ್ಯರಿಗೂ ನಾನ್ಹೇಳ್ತೀನಿ, ಈ ಸುಗ್ಗಿ ಹಬ್ಬಾಗೆ ದೋಣು ಮುಟ್ಟಂಗಿಲ್ಲ ಅಂತ. ಅದೆಲ್ಲಿಂದ ಕಲ್ಡಿಸೆಟ್ ತಂದು ಬಡಿಸ್ಕಂತಾರೋ ಬಡಿಸ್ಕಳಲಿಟಿ ಎಂದು ಜೋರುದನಿಯಲ್ಲಿ ಫರ್ಮಾನು ಹೊರಡಿಸಿದ. ಮಾತನ್ನು ಮುಂದುವರೆಸಲೆಣಿಸಿದವನು ಬೋಬಯ್ಯ ಬಂದದನ್ನು ನೋಡಿ ಮಾತು ಹೊರಳಿಸಿದವನಂತೆ ಚೌತ ಯಾವತ್ತೇಳು? ಎಂದು ಪಕ್ಕದಲ್ಲಿ ನಿಂತಿದ್ದ ಗೋಪಾಲನನ್ನು ಕೇಳಿದ.

ಮಲೆನಾಡಿನ ನಿಶಾನಿ ಅಂದ್ರೆ ಅದೊಂದು ಅದ್ಭುತ. ದೋಣು, ಹಲಗೆ, ಕೊಂಬು, ಕಂಜ್ರಿ, ತಮಟೆ, ತಾಳ, ಮೋರಿ, ಕಹಳೆ, ಗಿಲ್ಕಿ, ಪೀಪಿ ಇವೆಲ್ಲದರ ಕ್ರಮಬದ್ಧ ಸಂಯೋಜನೆಯ ಪ್ರಸ್ತುತಪಡಿಸುವಿಕೆಯೇ ಜಡ್ಜಡ್ಡು ಮಣಕಟ್ಟು, ಜಡ್ಜಡ್ಡು ಮಣಕಟ್ಟು ಎಂದು ಸುಮ್ಮನೇ ನಿಂತ ಎಂಥವರನ್ನೂ ತನ್ನ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಲು ಪ್ರಚೋದಿಸುತ್ತದೆ. ನಿಶಾನಿ ಬಾರಿಸುವ ಸಮಾರಂಭಗಳಲ್ಲಿ ಆ ವಾದ್ಯಗಳನ್ನು ಸಿದ್ಧಮಾಡಿಕೊಳ್ಳುವುದೇ ಒಂದು ಸಡಗರದ ಕ್ಷಣ. ಭತ್ತದ ಹುಲ್ಲಿನ ಕಂತೆಯನ್ನು ಕಟ್ಟು ಬಿಚ್ಚಿ ಒಂದೆಡೆ ರಾಶಿಹಾಕಿ ಬೆಂಕಿಕಡ್ಡಿ ಗೀರಿ, ಆ ಹುಲ್ಲಿನ ರಾಶಿಗೆ ಬೆಂಕಿ ನೀಡಲಾಗುತ್ತದೆ. ನಿಶಾನಿಯ ಚರ್ಮವಾದ್ಯಗಳಾದ ಹಲಗೆ, ದೋಣು, ತಮಟೆಗಳನ್ನು ಆ ಬೆಂಕಿಯ ಶಾಖದಲ್ಲಿ ಹದವಾಗಿ ಕಾಯಿಸಿ, ಠಣ್ ಎಂದು ಶಬ್ದ ಬರುವಂತೆ ಬಿಗಿಮಾಡಿಕೊಂಡು ಜಡ್ಗುಟ್ಕಂಡು ಬಡಿಯಲು ಶುರೂ ಮಾಡಿದ್ರಂದ್ರೆ ಸುತ್ತಾ ನಿಂತಿದ್ದವರು ಮೊಣಕಾಲು ನೇರವಾಗದಂತೆ ಕೈಕಾಲುಗಳನ್ನು ಕಾಲೆಕರೆ ವಿಸ್ತಾರಕ್ಕೂ ಮೀರಿ ಜಾಡಿಸುತ್ತಾ ಮೈಮೇಲೆ ಸಾಕ್ಷಾತ್ ಗಣಮಗನೇ ಆವಾಹನೆಯಾದಂತೆ ದಿದ್ದಿರಿ ದಿದ್ದಿರಿ ಎಂದು ಮೈಯ್ಯಲಿರುವ ನೆಣವೆಲ್ಲಾ ಕರಗಿ ಇಳಿವಂತೆ ಮೈಮರೆತು ಕುಣಿಯುತ್ತಾ, ಕುಣಿತವನ್ನು ನೋಡುತ್ತ ನಿಂತವರನ್ನೂ ಸವಾಲೆಸೆದು ಕರೆದು ಇಡೀ ಸಮಾರಂಭಕ್ಕೆ ಕೊನೆಮೊದಲಿಲ್ಲದ ರೋಚಕತೆಯನ್ನು ಸೃಷ್ಠಿಸುತಿದ್ದರೆ, ಅತ್ತ ಹಲಗೆ ಬಡಿಯುವವನು, ತಮಟೆ ಚಚ್ಚುವವನು, ದೋಣು ಗುದ್ದುವವನು ಕುಣಿಯುವವರಿಗೆ ತಾವೇನೂ ಕಡಿಮೆಯಿಲ್ಲವೆಂಬಂತೆ ತಮ್ಮದೆಗೆ ತಮ್ಮದೇ ಮಂಡಿಗಳಿನ್ನೇನು ಗುದ್ದೇಬಿಡುತ್ತವೆ ಎಂಬಂತೆ ಕಾಲೆತ್ತೆತ್ತಿ ಹೆಜ್ಜೆ ಹಾಕುತಿದ್ದರೆ ಆ ಸುತ್ತಲಿನ ನೆಲವೇ ಅದುರುತ್ತಾ ತಾನೂ ಸಮಾರಂಭದ ತಾರಾಟದಲ್ಲಿ ಭಾಗಿಯಾದಂತೆ ವರ್ತಿಸಲಾರಂಭಿಸುತ್ತದೆ.

ಸಂಗೀತ ಸಂಯೋಜನೆಯೊಂದೇ ಈ ಜಗತ್ತಿನ ಅತ್ಯಂತ ಸೃಜನಶೀಲ ಕಲೆ ಎಂದೆನಿಸುತ್ತದೆ. ಇತರೆಲ್ಲಾ ಕಲೆಗಳೂ ಯಾವುದಾದರೂ ಒಂದು ಪ್ರಾಕೃತಿಕ ಸಹಜ ಚಟುವಟಿಕೆಯ ಮುಂದುವರೆದ ಹಂತವಾಗಿರುತ್ತದೆ. ಆದರೆ ಈ ಟ್ಯೂನಿಂಗ್ ಎನ್ನುವುದು ಅಪ್ಪಟ ಕ್ರಿಯಾಶೀಲ ಮತ್ತು ಕ್ರಿಯಾತ್ಮಕ ಕೃತಿಯಾಗಿರುತ್ತದೆ. ಸಂಗೀತಕ್ಕಿರುವ ಅಸಾಧಾರಣ ಶಕ್ತಿಗೂ ಈ ಒರಿಜಿನಾಲಿಟಿಯೇ ಕಾರಣ.

(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248